31

# “ನನ್ನಲ್ಲಿ ನಿಮಗೆ ಸಮಾಧಾನವಿರುವುದು”

## (16:1-33)

ಈ ವಾಕ್ಯಭಾಗದಿಂದ ನಾನು ಪ್ರಸಂಗಿಸುವದಕ್ಕಿಂತ ಒಂದು ವಾರ ಮೊದಲು, ನಾನು ವಾಸಿಸುತ್ತಿದ್ದ ಸಮಾಜವು ಎರಡು ಭಯಂಕರವಾದ ದುರ್ಘಟನೆಗಳಿಂದ ಅಪ್ಪಳಿಸಲ್ಪಟ್ಟಿತು. ಮೊದಲನೆಯದು, ಬೇಸ್‌ಬಾಲ್ ಆಡುತ್ತಿದ್ದಾಗ ಹದಿನೈದು ವರ್ಷವಯಸ್ಸಿನ ಬಾಲಕನು ಸತ್ತು ಹೋದದ್ದು. ಸಾಯಂಕಾಲದ ಬೇಸ್‌ಬಾಲ್ ಆಟದ ಮೊದಲಿನ ಇನ್ನಿಂಗ್‌ನಲ್ಲಿ, ಅವನು ಚೆನ್ನಾಗಿ ಹೊಡೆದು ತನ್ನ ಟೀಮಿಗೆ ಮೊದಲನೆಯ ಪಾಯಿಂಟನ್ನು ಸ್ಕೋರ್‌ಮಾಡಿದ್ದನು ಆಗ, ಅವನು ತನ್ನ ಟೀಮಿನ ಜೊತೆಯವರೊಂದಿಗೆ ಹಿಂದಿರುಗಿ ನಡೆಯುತ್ತಿದ್ದಾಗ, ಅವನು ಸತ್ತು ಬಿದ್ದನು. ಒಂದು ನಿಮಿಷ ಅವನು ಆರೋಗ್ಯದ ಒಂದು ಚಿತ್ರದಂತೆ ಕಂಡು ಬಂದನು. ಮತ್ತು ಮುಂದಿನ ನಿಮಿಷದಲ್ಲಿ ಅವನು ಸತ್ತು ಹೋಗಿದ್ದನು. ವಾರದ ಎರಡನೆಯ ದುರ್ಘಟನೆಯು ಮೂವತ್ತೈದು ವರ್ಷ ಪ್ರಾಯದ ಕ್ರೈಸ್ತ ಮಹಿಳೆಯ ಕೊಲೆ ಮತ್ತು ಆಕೆಯ ಹನ್ನೊಂದು ವರ್ಷ ಪ್ರಾಯದ ಮಗಳು ಪ್ರಾಣಾಂತಿಕವಾಗಿ ಹೊಡೆಯಲ್ಪಟ್ಟದ್ದು ನಮ್ಮ ಜೀವಿತಗಳ ಎರಡು ಆರಾಮದಾಯಕ ಭ್ರಮೆಗಳು - ಯುವಕ, ಆರೋಗ್ಯವಂತ ಜನರು ಸಾಯಲಾರರು ಮತ್ತು ನಮ್ಮ ಸಮಾಜವು ಹಿಂಸೆಯ ಅಪರಾಧ ಹೊಂದುವದಿಲ್ಲ ಎಂಬ ಭ್ರಮೆಗಳು ಕೆಲವೇ ದಿನಗಳಲ್ಲಿ ಬಡಿಯಲ್ಪಟ್ಟವು. ವಾರದ ಘಟನೆಗಳು ನಮ್ಮನ್ನು ಗಲಿಬಿಲಿ ಗೊಂಡವರನ್ನಾಗಿಯೂ ಕಂಗೆಟ್ಟವರನ್ನಾಗಿಯೂ ಮಾಡಿದವು. “ಗಲಿಬಿಲಿಗೊಳಿಸ್ಪಟ್ಟಿದ್ದು” ಮತ್ತು “ಕಂಗೆಟ್ಟಿದ್ದು” ಎಂಬ ಪದಗಳು ಯೋಹಾನ 16ರಲ್ಲಿಯ ಶಿಷ್ಯರ ಮನಸ್ಥಿತಿಯನ್ನು ವಿವರಿಸಲು ಅತ್ಯುತ್ತಮ ಪದಗಳಾಗಿರುವದು ಅತೀ ಆಶ್ಚರ್ಯಕರವಾದದ್ದಾಗಿದೆ. ಹೀಗಿರುವದರಿಂದ ಅದು ಬಹಳ ಕಷ್ಟಕರವಾದ ವಾರಕ್ಕೆ ಪರಿಪೂರ್ಣವಾದ ಪಠ್ಯವಾಗಿತ್ತು.

---

ಪ್ರಸಂಗಿಸುವದಕ್ಕೆ ಸಿದ್ಧತೆ ಮಾಡಿಕೊಳ್ಳುವುದು ಯಾಕೋಬನು ದೇವರೊಂದಿಗೆ ಹೋರಾಡಿದ ರಾತ್ರಿಗೆ ಸಮನಾಗಿರುತ್ತದೆ.[1] ಜಬ್ಬೋಕ ನದಿಯ ತೀರದಲ್ಲಿ ಏಕಾಂಗಿಯಾಗಿ, ಯಾಕೋಬನು ತನ್ನ ವಿಚಾರಗಳೊಂದಿಗೆ ತನ್ನ ಸ್ಮರಣೆಗಳೊಂದಿಗೆ, ತನ್ನ ಭಯಗಳೊಂದಿಗೆ ಮತ್ತು ದೇವರ ದೂತನೊಂದಿಗೆ ಬೆಳಗಿನ ಜಾವದವರೆಗೆ ಹೋರಾಡಿದನು. ಯಾಕೋಬ ನನ್ನು ಎದುರಿಸುತ್ತಿದ್ದಾತನು ತನ್ನನ್ನು ಬಿಟ್ಟು ಬಿಡಬೇಕೆಂದು ಮರುದಿನ ಸೂರ್ಯೋದಯವಾಗಲು ಪ್ರಾರಂಭಿಸಿದಾಗ ಆಜ್ಞಾಪಿಸಿದನು. ಯಾಕೋಬನು ನಿರಾಕರಿಸಿದನು ಮತ್ತು “ನೀನು ನನ್ನನ್ನು ಆಶೀರ್ವದಿಸದಿದ್ದರೆ ನಿನ್ನನ್ನು ಹೋಗಲು ಬಿಡುವದಿಲ್ಲ” (ಆದಿಕಾಂಡ 32:26) ಎಂದು ಹೇಳಿದನು. ಪ್ರಸಂಗಿಸುವುದು ಬಹಳ ಸಲ ಹಾಗಿರುವುದು: ಕಠಿಣವಾದ ಪಠ್ಯಗಳೊಂದಿಗೆ ಪ್ರಸಂಗಿಸಲು ದೀರ್ಘವಾಗಿ ಮತ್ತು ಕಠಿಣ ವಾಗಿ ಹೋರಾಡುವರು ಮತ್ತು ಕೆಲವು ಸಲ ಎಲ್ಲಿಗೂ ತಲುಪುವದಿಲ್ಲ ಎಂಬಂತೆ ತೋರುವುದು. ಹೀಗಿದ್ದರೂ, ಹೋರಾಟವು ನಮ್ಮನ್ನು ನಿರಾಶರನ್ನಾಗಿ ಮಾಡುವುದಿಲ್ಲ; ವಾಕ್ಯಭಾಗವನ್ನು ಅಂತಿಮವಾಗಿ ನಮ್ಮನ್ನು ಆಶೀರ್ವದಿಸುವವರೆಗೆ “ಹಿಡಿದುಕೊಳ್ಳಲಿಕ್ಕೆ” ನಮ್ಮನ್ನು ಪ್ರೇರೇಪಿಸುವುದು.

ಯೋಹಾನ 16ರೊಂದಿಗೆ ನನ್ನ ಅನುಭವವು ಅಂಥದ್ದಾಗಿತ್ತು ವಾರವೆಲ್ಲಾ ಅದರ ಸಂದೇಶ ವನ್ನು ಸಂಕ್ಷೇಪಿಸಿ ಸಂಘಟಿಸುವ ನನ್ನ ಪ್ರತಿಯೊಂದು ಪ್ರಯತ್ನವನ್ನು ಎದುರಿಸುವಂತೆ ತೋರಿತು. ಬಹಳಷ್ಟು ಸಂಭವಿಸುತ್ತಿತ್ತು ಮತ್ತು ಬಹಳಷ್ಟು ಹೇಳಲ್ಪಟ್ಟಿತ್ತು. ಆಗ, ಒಂದು

ಪ್ರಾತಃಕಾಲ ನಾನು ನನ್ನ ಕೆಲಸಕ್ಕೆ ಹೋಗುತ್ತಿದ್ದಾಗ, ಪಠ್ಯದ ಬಗ್ಗೆ ನನ್ನನ್ನು ಆಶಾಭಂಗಪಡಿಸಿದ ಅದೇ ಗುಣಲಕ್ಷಣಗಳು ಪಠ್ಯಕ್ಕೆ ಅದರ ಬಲವನ್ನೂ ಮತ್ತು ನಮ್ಮ ಇಂದಿನ ಪರಿಸ್ಥಿತಿಯಲ್ಲಿ ಸಮಂಜಸತೆಯನ್ನು ಕೊಡುವ ಅದೇ ಗುಣಲಕ್ಷಣಗಳಾಗಿವೆ ಎಂಬುದು ನನಗೆ ಹೊಳೆಯಿತು. ಅದು ಸರಳೀಕರಣವನ್ನೂ, ಕಡಿಮೆ ಮಾಡುವದನ್ನೂ ಮತ್ತು ಸಂಘಟನೆಯನ್ನೂ ತಿರಸ್ಕರಿಸುತ್ತದೆ; ಆದರೆ ಆಗ, ಹೆಚ್ಚಾದ ಜೀವಿತವು ಹಾಗೆ ಮಾಡುತ್ತದೆ. ಯೋಹಾನ 16ರ ತಿರುಚುವ, ಸುಳಿಯಂತಿರುವ, ಅವಸರದ ಸಂದೇಶವು ಇಂದು ನಮಗೆ ಪರಿಪೂರ್ಣವಾದ ಪಠ್ಯವಾಗಿರುತ್ತದೆ.

ಈ ಅಧ್ಯಾಯದ ಸಂದೇಶವನ್ನು ನೋಡುವದಕ್ಕಿಂತ ಮೊದಲು, ಅದು ಈ ಸುವಾರ್ತೆಯಲ್ಲಿ ಎಲ್ಲಿ ಕಂಡುಬರುತ್ತದೆ ಎಂಬುದನ್ನು ನಾವು ಜ್ಞಾಪಿಸಿಕೊಳ್ಳುವ ಅಗತ್ಯತೆಯಿದೆ. ಹೆಚ್ಚಾಗಿ ಬಹಿರಂಗ ಸೇವೆಯ ಹನ್ನೆರಡು ಅಧ್ಯಾಯಗಳನ್ನು ಹಿಂಬಾಲಿಸಿ 13ರಿಂದ 17ನೆಯ ವರೆಗಿನ ಅಧ್ಯಾಯಗಳು ಯೇಸುವಿನ ಮತ್ತು ಆತನ ಹನ್ನೆರಡು ಜನ ಶಿಷ್ಯರ ಮಧ್ಯದಲ್ಲಿಯ ನಿಕಟವಾದ ವಿನಿಮಯಗಳಿಂದ ತುಂಬಿಕೊಂಡಿರುತ್ತವೆ. ತನ್ನ ಮರಣವು ಸಮೀಪಿಸಿದಂತೆ ಆತನು ಅವರ ಬಗ್ಗೆ ಆಳವಾಗಿ ಚಿಂತಿತನಾಗಿದ್ದನು ಅದರ ಪರಿಣಾಮವಾಗಿ ಈ ನಾಲ್ಕು ಅಧ್ಯಾಯಗಳಲ್ಲಿಯ ಬೋಧನೆಗಳು ಅವರಿಂದ ಆತನ ಅಗಲುವಿಕೆಗೆ ಶಿಷ್ಯರನ್ನು ಸಿದ್ಧಪಡಿಸುವಿಕೆಗೆ ಸೀಮಿತವಾಗಿದ್ದವು. ನಮ್ಮ ಪಠ್ಯದ ಪ್ರಾರಂಭದಿಂದ, ಅಧ್ಯಾಯ 16, ಯೇಸುವು ಅವರ ಪಾದಗಳನ್ನು ತೊಳೆದನು, ಯೂದನು ಯೇಸುವನ್ನು ಹಿಡಿದು ಕೊಡಲು ಬಿಡಲ್ಪಟ್ಟನು, ಯೇಸುವು ತಾನು "ಹೊರಟು ಹೋಗುವೆನೆಂದು" ಅವರಿಗೆ ಹೇಳಿದನು, ಮತ್ತು ಬರಲಿಕ್ಕಿದ್ದ ಹಿಂಸೆಯ ಬಗ್ಗೆ ಆತನು ಅವರಿಗೆ ಎಚ್ಚರಿಕೆ ಕೊಟ್ಟನು.

## "ಪರಿಶುದ್ಧಾತ್ಮನನ್ನು ಅನುಸರಿಸಿರಿ" (16:5-15)

ಹೊರಟು ಹೋಗುವಿಕೆಗಾಗಿ ತನ್ನ ಸಿದ್ಧತೆಯನ್ನು ಮುಂದುವರಿಸಿ, ಯೇಸುವು ಅವರಿಗೆ ತಾನು ಹೊರಟು ಹೋಗುವುದು ಅವರಿಗೆ ಹಿತಕರವಾಗಿದೆ ಎಂದು ಹೇಳಲಿಕ್ಕೆ ಪ್ರಾರಂಭಿಸಿದನು (16:7). ತಾನು ಹೋಗುವದರಿಂದ "ಸಹಾಯಕನು"[2] ಬರುವಂತೆ ಅವರ ಜ್ಞಾಪಕಕ್ಕೆ ತಂದನು. ಈ ಸಹಾಯಕನು, ಪರಿಶುದ್ಧಾತ್ಮನು, ಯೇಸುವು ಪ್ರಾರಂಭಿಸಿದ್ದ ಸೇವೆಯನ್ನು ಮುಂದುವರಿಸುವನು. ಯೇಸು ಹೀಗೆ ಹೇಳಿದನು,

> ನಾನು ನಿಮಗೆ ಹೇಳಬೇಕಾದದ್ದು ಇನ್ನೂ ಬಹಳ ಉಂಟು, ಆದರೆ ಸದ್ಯಕ್ಕೆ ಅದನ್ನು ಹೊರಲಾರಿರಿ. ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ನಡಿಸಿಕೊಂಡು ಹೋಗಿ ಸಕಲ ವಿಷಯದಲ್ಲಿಯೂ, ಸತ್ಯಕ್ಕೆ ಸೇರಿಸುವನು. ಆತನು ತನ್ನಷ್ಟಕ್ಕೆ ತಾನೇ ಮಾತಾಡದೆ ಕೇಳಿದ ಮಾತುಗಳನ್ನೇ ಆಡುವನು; ಮತ್ತು ಮುಂದಾಗುವ ಸಂಗತಿಗಳನ್ನು ನಿಮಗೆ ತಿಳಿಸುವನು. ಆತನು ನನ್ನದರೊಳಗಿಂದ ತೆಗೆದುಕೊಂಡು ನಿಮಗೆ ತಿಳಿಸುತ್ತಾ ನನ್ನನ್ನೇ ಮಹಿಮೆ ಪಡಿಸುವನು (16:12-14ಎ).

ಪರಿಶುದ್ಧಾತ್ಮನ ಬಗೆಗಿನ ಚರ್ಚೆಯು ಇಂದು ಗಲಿಬಿಲಿಯುಳ್ಳದ್ದೂ ನಿರ್ಣಾಯಕವಾದದ್ದೂ ಆಗಿರುತ್ತದೆ. ಆ ವಾಕ್ಯಭಾಗವು ಪರಿಶುದ್ಧಾತ್ಮನ ಬಗ್ಗೆ ಹೇಳಬಹುದಾಗಿದ್ದ ಪ್ರತಿಯೊಂದನ್ನು ಹೇಳದೇ ಇರುವದರಿಂದ, ಅದು ಆತ್ಮನ ಸೇವೆಯನ್ನು ವಿವರಿಸುತ್ತದೆ: ಯೇಸುವಿನ ಅನುಯಾಯಿಗಳನ್ನು ಎಲ್ಲಾ ಸತ್ಯದೊಳಗೆ ನಡಿಸುವುದು. ಇಂದು ಕ್ರೈಸ್ತರಿಗೆ, ಎಲ್ಲಾ ಸತ್ಯವು "ಎಲ್ಲಾ ಸತ್ಯದಲ್ಲಿ" ಅವರನ್ನು ನಡಿಸಿದಾಗ ಆತ್ಮನು ಅಪೊಸ್ತಲರಿಗೆ ಪ್ರಕಟಿಸಿದ್ದರ ಬೆಳಕಿನಲ್ಲಿ ಮೌಲೀಕರಿಸಲ್ಪಡತಕ್ಕದ್ದು. ಆತ್ಮನ ಉದ್ದೇಶವು ತನ್ನ ಕಡೆಗೆ ಗಮನ ಸೆಳೆಯುವದಿಲ್ಲ, ಆದರೆ ಕುಮಾರನನ್ನು ಮಹಿಮೆಪಡಿಸುವುದಾಗಿದೆ ಎಂಬುದನ್ನು ನಾವು ಜ್ಞಾಪಿಸಿಕೊಳ್ಳಬೇಕು. ಪರಿಶುದ್ಧಾತ್ಮನ ಬಗ್ಗೆ ಪ್ರತಿಯೊಂದು ಬೋಧನೆಯು ಈ ಎರಡು ಸತ್ಯಗಳೊಂದಿಗೆ ಏಕರೂಪತೆಯಲ್ಲಿರತಕ್ಕದ್ದು.

## “ದೈಹಿಕ ಸಂಬಂಧವನ್ನು ನಿರೀಕ್ಷಿಸಬೇಡಿರಿ” (16:16-22)

ಇಂದು ನಾವು ಸುಲಭವಾಗಿ ಅರ್ಥಮಾಡಿಕೊಳ್ಳುವಂಥ ಅನೇಕ ಹೇಳಿಕೆಗಳನ್ನು ಯೇಸುವು ಕೊಟ್ಟನು, ಆದರೆ ಆತನು ಅವುಗಳನ್ನು ಹೇಳಿದ ಸಮಯದಲ್ಲಿ ಆತನ ಶಿಷ್ಯರಿಗೆ ಬಹಳ ವಾಗಿ ಗಲಿಬಿಲಿಯನ್ನುಂಟು ಮಾಡುವವುಗಳಾಗಿದ್ದವು. ಅಂಥದ್ದು 16:16-22ರಲ್ಲಿ ಇರುತ್ತದೆ. ಯೇಸುವು ಅವರಿಗೆ ಬರುವ ದಿನಗಳಲ್ಲಿ ಅವರು ಆತನನ್ನು ನೋಡುವದಿಲ್ಲ ಆದರೆ “ಸ್ವಲ್ಪ ಸಮಯದ ನಂತರ” ಅವರು ಆತನನ್ನು ಪುನಃ ನೋಡುವರು ಎಂದು ಹೇಳಿದನು (16:16, 17). ಕ್ರಿಸ್ತನ ಮರಣ, ಹೂಣಿಡುವಿಕೆ ಮತ್ತು ಪುನರುತ್ಥಾನವು ಕ್ರೈಸ್ತರು ಸತತವಾಗಿ ಮಾತಾಡುವಂತ ವಿಷಯಗಳಾಗಿವೆ. ಅವರು ಜ್ಞಾಪಿಸಿಕೊಳ್ಳುವ ಮತ್ತು ಪ್ರತೀ ಭಾನುವಾರ ಕರ್ತನ ಬೋಜನ ಆಚರಿಸುವಂತೆ ಜ್ಞಾಪಿಸಿಕೊಳ್ಳುವ ಘಟನೆಗಳಾಗಿವೆ. ಹೀಗಿದ್ದರೂ, ಇದು ಶಿಲುಬೆಗಿಂತ ಮೊದಲು ವಿಚಾರಿಸಲಾಗದ ವಿಚಾರವಾಗಿತ್ತು. ಶಿಷ್ಯರಿಗೆ ಅದು ಯೇಸುವು ಅಸಾದ್ಯವಾದ ಒಗಟುಗಳಲ್ಲಿ ಮಾತಾಡುತ್ತಿರುವಂತೆ ತೋರಿತು.

ತನ್ನ ಹೊರಟು ಹೋಗುವಿಕೆಗಾಗಿ ಯೇಸುವು ತನ್ನ ಶಿಷ್ಯರನ್ನು ಸಿದ್ಧಪಡಿಸುವದರಲ್ಲಿ ಮುಂದುವರಿದನು; ಯಾಕಂದರೆ ಆ ರಾತ್ರಿಯಲ್ಲಿ ಶಿಷ್ಯರು ಎಷ್ಟೋ ಗಲಿಬಿಲಿಯಲ್ಲಿದ್ದರೂ, ಮರುದಿನ ಯೇಸುವು ಶಿಲುಬೆಗೆ ಹಾಕಲ್ಪಡುವಾಗ ಅವರು ಇನ್ನೂ ಹೆಚ್ಚು ಗಲಿಬಿಲಿಗೊಂಡಿರುವರು ಎಂಬುದನ್ನು ಯೇಸುವು ತಿಳಿದಿದ್ದನು. ಆದುದರಿಂದ, ಆತನು ಏನು ಸಂಭವಿಸುತ್ತದೆ ಎಂಬುದನ್ನು ಕುರಿತು ತನ್ನ ಸಂದೇಶದೊಂದಿಗೆ ಮುಂದುವರಿದನು. ಲೋಕವು ಸಂತೋಷಿ ಸುತ್ತಿರವಾಗ ಅವರು ಅಳುತ್ತಿರುವರು ಎಂದು ಆದನ್ನು ಅವರಿಗೆ ಹೇಳಿದನು. ಆದಾಗ್ಯೂ ಸ್ವಲ್ಪ ಸಮಯದಲ್ಲಿ ಶಿಷ್ಯರು ಸಂತೋಷಪಡುವಾಗ ಲೋಕವು ಅಳುತ್ತಿರುವುದು ಎಂದೂ ಆತನು  ಹೇಳಿದನು (16:20-22). ಇದು ಯೇಸುವಿನ ಮರಣ, ಹೂಣಿಡುವಿಕೆ ಮತ್ತು ಪುನರುತ್ಥಾನದಲ್ಲಿ ನಡೆಯಿತೆಂಬುದನ್ನು ನಾವು ನೋಡುತ್ತೇವೆ, ಆದರೆ ಆ ಸಮಯದಲ್ಲಿ ಶಿಷ್ಯರು ಈ ಮಹತ್ವದ ಸತ್ಯವನ್ನು ಗ್ರಹಿಸಿಕೊಳ್ಳಲು ಅಶಕ್ತರಾಗಿದ್ದರು.

## “ನನ್ನ ಹೆಸರಿನಲ್ಲಿ ಬೇಡಿಕೊಳ್ಳಿರಿ” (16:23-28)

ಒಮ್ಮೆ ತಾನು ತಂದೆಯ ಬಳಿಗೆ ಏರಿ ಹೋದರೆ ಅವರ ಪರಿಸ್ಥಿತಿಯು ಹೇಗೆ ನಿಜವಾ ಗಿಯೂ ಹೆಚ್ಚು ಉತ್ತಮವಾಗುವುದು ಎಂದು ಅವರಿಗೆ ಹೇಳುವದರಿಂದ ಯೇಸುವು ಶಿಷ್ಯರನ್ನು ಆದರಿಸುವದನ್ನು ಹಾಗೂ ಸಿದ್ಧಪಡಿಸುವದನ್ನು ಮುಂದುವರಿಸಿದನು: “ಆ ದಿನದಲ್ಲಿ ನೀವು ನನಗೆ ಯಾವ ಪ್ರಶ್ನೆಯನ್ನೂ ಮಾಡುವದಿಲ್ಲ, ನಿಮಗೆ ನಿಜನಿಜವಾಗಿ ಹೇಳುತ್ತೇನೆ, ನೀವು ತಂದೆಯನ್ನು ಏನಾದರೂ ಬೇಡಿಕೊಂಡರೆ ಅದನ್ನು ಆತನು ನನ್ನ ಹೆಸರಿನ ಮೇಲೆ ನಿಮಗೆ ಕೊಡುವನು. ನೀವು ಇದುವರೆಗೆ ನನ್ನ ಹೆಸರಿನ ಮೇಲೆ ಯಾವದೊಂದನ್ನೂ ಬೇಡಿ ಕೊಂಡಿಲ್ಲ, ಬೇಡಿಕೊಳ್ಳಿರಿ, ನಿಮಗೆ ಸಿಕ್ಕುವದು; ಆಗ ನಿಮ್ಮ ಆನಂದವು ಪರಿಪೂರ್ಣವಾಗುವದು” (16:23, 24). ಅದು ಸತ್ಯವಾಗಿ ಹೇಗೆ ಸಾಧ್ಯವಾಗಬಹುದೆಂದು ಅವರು ಅರ್ಥಮಾಡಿಕೊಳ್ಳಲಾಗದಿದ್ದರೂ, ಯೇಸುವು ಅವರಿಗೆ ತಾನು ಪರಲೋಕಕ್ಕೆ ಹಿಂದಿರುಗಿದಾಗ, ವಿವರಿಸಲಾಗದಂಥ ಆತ್ಮಿಕ ಬಲವು ಲೋಕ ದೊಳಗೆ ಬಿಡುಗಡೆ ಮಾಡಲ್ಪಡುವುದು ಎಂದು ಭರವಸೆಕೊಟ್ಟನು. ಲೋಕದ ಪಾಪಗಳಿಗಾಗಿ ಸುರಿಸಲ್ಪಡಲಿಕ್ಕಿರುವ ಆತನ ರಕ್ತವು ಮತ್ತು ಬರಲಿಕ್ಕಿದ್ದ ಪರಿಶುದ್ಧಾತ್ಮನು ಆತನ ಸ್ಥಳವನ್ನು ತೆಗೆದು ಕೊಳ್ಳುವ ಎರಡು ಶಕ್ತಿಗಳು ಕಲ್ಪಿಸಲಾರದ ರೀತಿಯಲ್ಲಿ ಜಗತ್ತನ್ನು ಆಶೀರ್ವದಿಸುವವು. ಯೇಸುವು ಅವರಿಗೆ ರೂಪಕಾಲಂಕಾರದ ಭಾಷೆಯಲ್ಲಿ ಮಾತಾಡಿದ್ದನು, ಯಾಕಂದರೆ, ಅವರು ಅದಕ್ಕೆ ಅಷ್ಟೇ ಸಿದ್ಧರಾಗಿದ್ದರು. ಹೀಗಿದ್ದರೂ, ಆತನ ಅರ್ಥವೇನಾಗಿತ್ತು ಎಂಬುದನ್ನು ಅವರು ಬೇಗನೇ “ಸ್ಪಷ್ಟವಾಗಿ” ತಿಳಿದುಕೊಳ್ಳುವರು (16:25). ಅವರು ಆತನ ಹೆಸರಿನಲ್ಲಿ ಕೇಳಿಕೊಳ್ಳು ವಾಗ, ಅವರು ತಮ್ಮ ಪ್ರಾರ್ಥನೆಗಳಿಗೆ ಉತ್ತರಗಳನ್ನು ಪಡೆಯುವರು (16:26-28).

## “ನನ್ನಲ್ಲಿ ನಂಬಿರಿ” (16:29-32)

ಯೇಸುವಿನ ಆದರಣೆಯ ಮಾತುಗಳಿಗೆ ಶಿಷ್ಯರ ಉತ್ತರವು ಆತನಲ್ಲಿ ತನ್ನ ನಂಬಿಕೆಯನ್ನು ಅರಿಕೆ ಮಾಡುವುದಾಗಿತ್ತು. *“ನೀನು ಸಮಸ್ತವನ್ನು ತಿಳಿದವನೆಂದೂ ನಿನಗೆ ಪ್ರಶ್ನೆ ಮಾಡಬೇಕಾದ ಅವಶ್ಯವಿಲ್ಲವೆಂದೂ ಈಗ ತಿಳಿಯಿತು; ಇದರಿಂದ ನಿನ್ನನ್ನು ದೇವರ ಬಳಿಯಿಂದ ಬಂದವನೆಂದು ನಂಬುತ್ತೇವೆ”* (16:30; ಒತ್ತಿ ಹೇಳಿದ್ದು ನನ್ನದು) ಎಂದು ಅವರು ಹೇಳಿದರು. ಪುನಃ ಯೋಹಾನನ ಸುವಾರ್ತೆಯಲ್ಲಿ “ನಂಬು” ಎಂಬ ಪದದ ಮಹತ್ವವನ್ನು ನಾವು ಗುರುತಿಸುತ್ತೇವೆ. ದೇವರ ಕುಮಾರನಂತೆ ಯೇಸುವಿನಲ್ಲಿ ನಂಬಿಕೆಯು ಈ ಸುವಾರ್ತೆಯ ಗುರಿಯಾಗಿದೆ (20:30, 31). ಯೋಹಾನನು “ನಂಬು” ಎಂಬುದನ್ನು ಅನೇಕ ವಿಧಗಳಲ್ಲಿ ಉಪಯೋಗಿ ಸಿದನೆಂದು ನಮಗೆ ಜ್ಞಾಪಿಸಲ್ಪಟ್ಟಿದೆ. ಕೆಲವು ವಚನಗಳಲ್ಲಿ ಒಬ್ಬ ವ್ಯಕ್ತಿಯು ಹೇಳಿಕೆಯನ್ನು ಸತ್ಯದಂತೆ ಸ್ವೀಕರಿಸಿದನೆಂದು ಅರ್ಥವಾಗುತ್ತದೆ. ಇತರವುಗಳಲ್ಲಿ ಒಬ್ಬನು ಯೇಸುವನ್ನು ದೇವರ ಕುಮಾರನಂತೆ ಸ್ವೀಕರಿಸಿದನು ಎಂದರ್ಥವಾಗುತ್ತದೆ. ಕೆಲವು ಸಲ ಯೇಸುವಿನಲ್ಲಿ ನಂಬಿಕೆಯೊಂದಿಗೆ “ಬಹಿರಂಗವಾಗಿ ಹೋಗುವುದು” ಎಂದರ್ಥವಾಗುತ್ತದೆ. ಬೇರೆ ಸಮಯಗಳಲ್ಲಿ ಯೇಸುವನ್ನು ಹಿಂಬಾಲಿಸುವದರಲ್ಲಿ ಒಬ್ಬನ ಸಮರ್ಪಣೆಯಲ್ಲಿ “ದೃಢವಾಗಿ ನಿಲ್ಲುವುದು” ಎಂದರ್ಥಕೊಡುತ್ತದೆ. 16:30ರಲ್ಲಿ ಶಿಷ್ಯರು ಯೇಸುವಿನ ಹೇಳಿಕೆಗಳನ್ನು ಸತ್ಯವೆಂಬುದಾಗಿ ಸ್ವೀಕರಿಸುತ್ತೇವೆ ಎಂದು ಹೇಳುತ್ತಿರುವರು; “ಆತನು ದೇವರಿಂದ ಬಂದನು” ಎಂದು ಅವರು ನಂಬಿದರು.

ಯೇಸುವು ಅವರ ನಂಬಿಕೆಯ ಹೇಳಿಕೆಯನ್ನು ಆಹ್ವಾನಿಸಿದನು, ಯಾಕಂದರೆ ಅವರು ತಮ್ಮ ನಂಬಿಕೆಗಳಿಗಾಗಿ ತ್ಯಾಗ ಮಾಡಲು ಇನ್ನೂ ಸಿದ್ಧರಾಗಿರಲಿಲ್ಲ (16:32). ಅವರು ಎಲ್ಲರೂ ತನ್ನನ್ನು ಒಬ್ಬಂಟಿಗನನ್ನಾಗಿ ಬಿಟ್ಟು ಹೋಗುವರು ಎಂದು ಅವರಿಗೆ ಹೇಳಿದನು. ಈ ಹಂತದಲ್ಲಿ, ಯೋಹಾನ ನ ಸುವಾರ್ತೆಯಲ್ಲಿ ಯೇಸುವು ಹೊರಗಿನ ಘಟನೆಗಳನ್ನು ನೋಡುತ್ತಿರುವದನ್ನು ನೋಡುತ್ತೇವೆ ಮತ್ತು ಇಂದು ಆತನಲ್ಲಿ ನಂಬುವದಕ್ಕೆ ನಮ್ಮ ಹೇಳಿಕೆಗಳಲ್ಲಿ ಆಹ್ವಾನಿಸುತ್ತಾನೆ. ನಾವು ನಿಜವಾ ಗಿಯೂ ನಂಬುತ್ತೇವೆಯೋ? ಆತನು ದೇವರ ಕುಮಾರನಾಗಿದ್ದಾನೆಂದು ನಾವು ನಂಬುತ್ತೇವೆ ಎಂದು ಹೇಳುತ್ತೇವೆ, ಆದರೆ ಅದು ಶ್ರಮೆಪಡುವುದು ಎಂದರ್ಥವಾಗುವಾಗ, ಆತನಿಗಾಗಿ ನಾವು ನಿಂತುಕೊಳ್ಳುತ್ತೇವೆಯೋ? ಯೋಹಾನನ ಸುವಾರ್ತೆಯು ಶಿಷ್ಯರ ನಂಬಿಕೆಯ ಕಥೆ ಮಾತ್ರವೇ ಆಗಿರುವದಿಲ್ಲ; ಅದು ನಮ್ಮ ನಂಬಿಕೆಯ ಕಥೆಯೂ ಆಗಿರುತ್ತದೆ!

## “ನನ್ನ ಸಮಾಧಾನವನ್ನು ಸ್ವೀಕರಿಸಿಕೊಳ್ಳಿರಿ” (16:33)

16ನೆಯ ಅಧ್ಯಾಯದಲ್ಲಿಯ ಯೇಸುವಿನ ಬೋಧನೆಗಳು ಒಂದು ಕ್ರೇಂದ್ರ ಮುಖ್ಯ ಪ್ರಸ್ತಾಪದಲ್ಲಿ ಒಂದಾಗಿ ಬಂದರೆ, ಅದು 33ನೆಯ ವಚನದ ಸಂದೇಶವಾಗಿರುತ್ತದೆ. ಎಲ್ಲಾ ಎಚ್ಚರಿಕೆಗಳು ಎಲ್ಲಾ ಮುಂತಿಳಿಸುವಿಕೆಗಳು, ಎಲ್ಲಾ ವಾಗ್ದಾನಗಳು, ಶಿಷ್ಯರಿಗೆ ಅವರ ಜೀವಿತಗಳ ಅತೀ ಹೆಚ್ಚು ಗೊಂದಲದ ಸಮಯದಲ್ಲಿ ಸಮಾಧಾನವನ್ನು ಕೊಡುವ ಉದ್ದೇಶಕ್ಕಾಗಿತ್ತು. ಯೇಸುವು ತನ್ನ ಶಿಷ್ಯರಿಗೆ ಅವರ ಜೀವಿತಗಳು ತೊಂದರೆಗಳಿಲ್ಲದೇ ಇರುವವೆಂದು ವಾಗ್ದಾನ ಮಾಡಲಿಲ್ಲ, ಆದರೆ ತೊಂದರೆಗಳ ಮಧ್ಯದಲ್ಲಿಯೂ ಸಹ ದೇವರ ಸಮಾಧಾನವನ್ನು ಆತನು ಅವರಿಗೆ ವಾಗ್ದಾನ ಮಾಡಿದನು: “ನೀವು ನನ್ನಲ್ಲಿದ್ದು ಮನಃಶಾಂತಿಯನ್ನು ಹೊಂದಿದವರಾಗಿರಬೇಕೆಂದು ಇದನ್ನೆಲ್ಲಾ ನಿಮಗೆ ಹೇಳಿದ್ದೇನೆ. ಲೋಕದಲ್ಲಿ ನಿಮಗೆ ಸಂಕಟ ಉಂಟು; ಧೈರ್ಯವಾಗಿರಿ, ನಾನು ಲೋಕವನ್ನು ಜಯಿಸಿದ್ದೇನೆ” (16:33). “ನಾನು” ಎಂಬುದು ಇಲ್ಲಿ ಒತ್ತಿ ಹೇಳಲ್ಪಟ್ಟಿದೆ. ಅನೇಕ ವಿಧಗಳಲ್ಲಿ ಮುಂದಿನ ಇಪ್ಪತ್ನಾಲ್ಕು ತಾಸುಗಳು ಜಗತ್ತು ಗೆದ್ದುಕೊಂಡಿದೆ ಮತ್ತು ಕೆಡುಕು ಜಯಹೊಂದಿದೆ ಎಂದು ಯೋಚಿಸಲು ಶಿಷ್ಯರಿಗೆ ಕಾರಣವಾಗುವುದು ಯೇಸುವು ತಾನು ಲೋಕವನ್ನು ಜಯಿಸಿದ್ದೇನೆ ಭರವಸೆಯಿಂದ ಒಪ್ಪಿಕೊಳ್ಳುವದರಿಂದ ಅವರನ್ನು ಸಿದ್ಧಪಡಿಸಿದನು. “ಜಯಿಸಿದ್ದೇನೆ” ಎಂಬುದು ಗ್ರೀಕ್‌ನಲ್ಲಿ ಪರ್ಫೆಕ್ಟ್ ಟೆನ್ಸ್‌ದಲ್ಲಿರುವುದು ಮಹತ್ವವುಳ್ಳದ್ದಾಗಿದೆ. ಆದುದರಿಂದ, ಅದು, “ನಾನು ಈಗಾಗಲೇ ಲೋಕ

ವನ್ನು ಜಯಿಸಿದ್ದೇನೆ, ಮತ್ತು ನಾನು ಜಯಿಸಿದ್ದರ ಪರಿಣಾಮವು ಈಗಾಗಲೇ ಕಂಡು ಬರುತ್ತದೆ" ಎಂಬರ್ಥವನ್ನು ಕೊಡುತ್ತದೆ. ಮರುದಿನದವರೆಗಿನ ಶಿಲುಬೆಯು ಅಕ್ಷರಶಃವಾಗಿ ಸಂಭವಿಸದೇ ಇರುವದರಿಂದ, ಯೇಸುವು ಎಲ್ಲವೂ ಯೋಜಿಸಿದಂತೆ ನಡೆಯುತ್ತಿರುವುದು, ಮತ್ತು ಅವರು ಬೇಗನೇ ಸಂಭವಿಸುವ ಘಟನೆಗಳಿಂದ ಆಶೀರ್ವದಿಸಲ್ಪಡುವರು ಎಂದು ತನ್ನ ನಂಬಿಕೆಯ ಭರವಸೆಯನ್ನು ಶಿಷ್ಯರಿಗೆ ವ್ಯಕ್ತಪಡಿಸಿದನು.

## ಮುಕ್ತಾಯ

ನಮ್ಮ ಪರಿಸ್ಥಿತಿಗಳು, ಮೊದಲು ಈ ಅಧ್ಯಾಯದಲ್ಲಿಯ ಆದರಣೆ ಕೊಡುವ ಮಾತುಗಳನ್ನು ಮೊದಲು ಶಿಷ್ಯರು ಕೇಳಿದ್ದಕ್ಕಿಂತ ಬಹಳ ದೂರದಲ್ಲಿದ್ದರೂ, ನಮ್ಮ ಜಗತ್ತು ನಿಜವಾಗಿಯೂ ಭಿನ್ನವಾಗಿರುವುದೋ? ಅದರಂತೆ ನಾವು ಅನಿರೀಕ್ಷಿತವಾದ ತೊಂದರೆಗಳನ್ನು ಎದುರಿಸುತ್ತೇವೆ, ದೇವರಲ್ಲಿ ಭರವಸೆಯನ್ನು ಕಳೆದುಕೊಳ್ಳುವ ಶೋಧನೆಯಲ್ಲಿರುತ್ತೇವೆ, ನಮ್ಮ ನಂಬಿಕೆಯ ಅರಿಕೆಯನ್ನು ನಾವೇ ಅಲ್ಲಗಳೆಯುವದನ್ನು ನೋಡುವದನ್ನು ಮಾತ್ರ ನಂಬುತ್ತೇವೆ ಎಂದು ಹೇಳಿಕೊಳ್ಳುತ್ತೇವೆ. ಮತ್ತು ಬಹಳ ಸಲ ಗೊಂದಲದಲ್ಲಿರುವ ಈ ಜಗತ್ತಿನಲ್ಲಿ ಸಮಾಧಾನಕ್ಕಾಗಿ ಬಹಳವಾಗಿ ಹಂಬಲಿಸುತ್ತಿರುತ್ತೇವೆ. ಶಿಷ್ಯರು ಬೇಗನೇ ಎದುರಿಸಬೇಕಾಗಿದ್ದ ತೀವ್ರವಾದ ತೊಂದರೆಗಳಿಗಾಗಿ ಸಿದ್ಧರಾಗಿರಬೇಕೆಂದು ಯೇಸುವು ಬಯಸಿದನು. ನಿಶ್ಚಯವಾಗಿಯೂ ಆತನ ಮಾತುಗಳು ನಮ್ಮ ಜೀವಿತಗಳಲ್ಲಿ ನಾಳೆ ನಾವು ಎದುರಿಸಬೇಕಾದದ್ದಕ್ಕಾಗಿ ನಮ್ಮನ್ನು ಸಿದ್ಧಪಡಿಸುವಂತೆ ಅದೇ ಉದ್ದೇಶವನ್ನು ಸಾಧಿಸುತ್ತವೆ. "ತೊಂದರೆಯನ್ನು ನಿರೀಕ್ಷಿಸಿರಿ ಮತ್ತು ಸಿದ್ಧರಾಗಿರಿ" ಎಂಬುದು ಯೋಹಾನ 16ರಲ್ಲಿ, ಕಠಿಣವಾದ ಸಮಯಗಳಲ್ಲಿ ದೇವರ ಸಮಾಧಾನವನ್ನು ಕಾಯ್ದುಕೊಳ್ಳುವದಕ್ಕಾಗಿ ಯೇಸುವಿನ ಸೂತ್ರವಾಗಿದೆ.

ಜೂನ್ 1995ರಲ್ಲಿ ಕ್ಯಾಪ್ಟನ್ ಸ್ಕೊಟ್ ಫ್ರಾನ್ಸಿಸ್ ಓಗ್ರೇಡಿ, ಯುನೈಟೆಡ್ ಸ್ಟೇಟ್ಸದ ಏರ್ ಫೋರ್ಸ್‌ದಲ್ಲಿ ವಿಮಾನ ಚಾಲಕನಾಗಿದ್ದವನು, ಬೋಸ್ನಿಯಾ - ಹರ್ಜೆಗೊವಿನಾದ ಮೇಲೆ ವಿಮಾನ ಹಾರಟದ ಸಮಯದಲ್ಲಿ ಹೊಡೆದುರುಳಿಸಲ್ಪಟ್ಟನು. ಅವನು ಪ್ಯಾರಾಚೂಟದಿಂದ ಸುರಕ್ಷಿತವಾಗಿ ಭೂಮಿಗೆ ತಲುಪಿದನು, ಆದರೆ ಅವನ ಮೇಲೆ ದಾಳಿ ಮಾಡಿದವರು ಅವನನ್ನು ಹುಡುಕುತ್ತ ಬಂದು ಅವನನ್ನು ಸೆರೆ ಹಿಡಿದುಕೊಂಡು ಹೋಗುವರು ಎಂಬುದನ್ನು ತಿಳಿದಿದ್ದನು. ಅವನು ತನ್ನ ವರ್ಷಗಳ ಏರ್‌ಫೋರ್ಸ್ ಸರ್ವೈವಲ್ ತರಬೇತಿಯನ್ನು ಕಾರ್ಯರೂಪದಲ್ಲಿ ತಂದು ಕೊಂಡು ವೈರಿ ಸೈನಿಕರಿಂದ ಆರು ದಿನಗಳವರೆಗೆ ಅಡಗಿಕೊಂಡಿರಲಿಕ್ಕೆ ಶಕ್ತನಾದನು, ಮತ್ತು ಅಂತಿಮವಾಗಿ ಹಡಗು ಪಡೆಗಳಿಂದ ರಕ್ಷಿಸಲ್ಪಟ್ಟನು, ಆ ಸಮಯದಲ್ಲಿ ಅವನು ಕುಡಿಯಲು ಮಳೆಯ ನೀರನ್ನು ಸಂಗ್ರಹಿಸುವದರಿಂದ, ತಿಗಣೆಗಳನ್ನು ತಿನ್ನುವದರಿಂದ ಉಳಿದುಕೊಂಡನು ಅವನ ಸಾಹಸದ ಬಗ್ಗೆ ಸಂದರ್ಶಿಸಲ್ಪಟ್ಟಾಗ ಓಗ್ರೇಡಿಯು ತನ್ನ ಜೀವವನ್ನು ರಕ್ಷಿಸಿದ್ದು ತನ್ನ ಉಳಿಯುವಿಕೆಯ ತರಬೇತಿಯೇ ಎಂದು ಹೇಳಿದನು. ತೊಂದರೆಯನ್ನು ನಿರೀಕ್ಷಿಸುವದನ್ನು ಏರ್‌ಫೋರ್ಸ ಅವನಿಗೆ ಕಲಿಸಿತ್ತು, ಆದುದರಿಂದ ಅದು ಬಂದಾಗ ಅವನು ಸಿದ್ಧನಾಗಿದ್ದನು.

ಜೀವನದಲ್ಲಿಯ ಎಲ್ಲಾ ಭಯಂಕರವಾದ ಸಾಧ್ಯತೆ ಬಗ್ಗೆ ಇಂದು ತನ್ನ ಶಿಷ್ಯರು ಚಿಂತಿಸಬೇಕೆಂದು ಯೇಸುವು ಬಯಸುವದಿಲ್ಲ (ಮತ್ತಾಯ 6:25-34), ಆದರೆ ತೊಂದರೆಯು ಶಿಷ್ಯರ ಜೀವನದ ಭಾಗವಾಗಿದೆಯೆಂಬುದನ್ನು ನಾವು ತಿಳಿಯಬೇಕೆಂದು ಆತನು ಬಯಸುತ್ತಾನೆ. ಇದನ್ನು ತಿಳಿದುಕೊಂಡು, ತೊಂದರೆಯು ಬರುವಾಗ ನಾವು ಆತ್ಮೀಕವಾಗಿ ನಾಶಪಡಿಸಲ್ಪಡದಂತೆ, ನಾವು ಸಿದ್ಧರಾಗಬಹುದು.

ಅನೇಕ ಸಲ, ಆ ಸಮಯಕ್ಕೆ ನಾವು ಕೇಳುವ ಅಗತ್ಯತೆಯಿದೆಯೆಂದು ನಾವು ಯೋಚಿಸದಿರುವದನ್ನು ಕೇಳುವದಕ್ಕೆ ಅಗತ್ಯತೆಯಿದೆ. ಜನರು ಕೆಲವು ಸಲ ಬೈಬಲ್ ಕ್ಲಾಸಿನ ಬಗ್ಗೆ ಇಲ್ಲವೇ ಪ್ರಸಂಗದ ಬಗ್ಗೆ, "ನಾನು ಈಗ ಇರುವದರೊಂದಿಗೆ ಅದಕ್ಕೆ ಸಂಬಂಧವಿಲ್ಲ" ಎಂದು ದೂರುತ್ತಾರೆ. "ನಾವು ಈಗ ಇಲ್ಲದಿರುವದರ" ಬಗ್ಗೆ ಪಾಠಗಳನ್ನು ಆಗಾಗ ಕೇಳುವದರ ಅಗತ್ಯತೆ

ಇರುತ್ತದೆ ಎಂಬುದು ಸತ್ಯವಾಗಿದೆ. ಅಂದರೆ, ನಾವು ಕೊನೆಗೆ ಎಲ್ಲಿರುವೆವು ಎಂಬುದರ ಬಗ್ಗೆ ಕೇಳುವ, ಭವಿಷ್ಯದಲ್ಲಿ ನಾವು ಎದುರಿಸಬಹುದಾದ ಪರಿಸ್ಥಿತಿಗಳಿಗೆ ಸಿದ್ಧರಾಗುವ ಅಗತ್ಯತೆಯಿದೆ. 16ನೆಯ ಅಧ್ಯಾಯದಲ್ಲಿ ಯೇಸುವು ಹೇಳಿದ್ದನ್ನು ಶಿಷ್ಯರು ನಿಶ್ಚಯವಾಗಿಯೂ ಆನಂದಿಸಲಿಲ್ಲ, ಆದರೆ ಯೇಸುವು ಅವರು ಅದನ್ನು ಕೇಳುವ ಅಗತ್ಯತೆಯಿತ್ತೆಂದು ತಿಳಿದಿದ್ದನು. ಅದೇ ರೀತಿ ಯಲ್ಲಿ ಪರಿಶುದ್ಧ ಬರಹಗಳ ಸಂಪೂರ್ಣ ಸಂದೇಶವನ್ನು ಕೇಳುವ ಅಗತ್ಯತೆಯಲ್ಲಿದ್ದೇವೆ ಆಗ ಪೌಲನು ಹೇಳಿದಂತೆ, ನಮ್ಮ ಮಾರ್ಗದಲ್ಲಿ ಬರುವ ಯಾವುದೇ ಸಂಗತಿಗಾಗಿ ನಾವು ಪೂರ್ಣ ವಾಗಿ ಸಿದ್ಧರಾಗಿದ್ದೇವೆ (2 ತಿಮೊಥೆ 3:14-17).

ನನಗೆ ಹನ್ನೆರಡು ಮತ್ತು ನಾಲ್ಕು ವಯಸ್ಸಿನ ಇಬ್ಬರು ಹೆಣ್ಣುಮಕ್ಕಳು ಇದ್ದಾರೆ ತಂದೆಯಾಗಿ, ಈ ದಿನಗಳಲ್ಲಿ ಗಡಿಯಾರವು ಹೆಚ್ಚೆಚ್ಚಾಗಿ ಗಟ್ಟಿಯಾಗಿ ಶಬ್ದಮಾಡುತ್ತದೆ. ನನ್ನ ಮಕ್ಕಳೊಂದಿನ ನನ್ನ ಸಮಯವು ಬೇಗನೇ ದಾಟಿ ಹೋಗುತ್ತದೆ ಎಂಬುದನ್ನು ತಿಳಿದಿದ್ದೇವೆ ಮತ್ತು ಕೆಲವೇ ವರ್ಷಗಳಲ್ಲಿ ಅವರು ನನ್ನ ಮನೆಯಿಂದ ಹೊರಟು ಹೋಗುತ್ತಾರೆ. ಇದನ್ನು ಅರಿತವನಾಗಿ, ಅವರು ಸಿದ್ಧರಾಗಿರುವರೋ ಎಂದು ಆಗಾಗ ನಾನು ಆಶ್ಚರ್ಯಪಡುತ್ತೇನೆ. ಈ ಜಗತ್ತಿನಲ್ಲಿ ಉಳಿದು ಕೊಂಡು ಮುಂದುವರಿಯುವನ್ನು ಅವರು ತಿಳಿದಿರುವರೋ? ತಮ್ಮ ಬಗ್ಗೆ ಹೇಗೆ ಕಾಳಜಿವಹಿಸಿಕೊಳ್ಳ ಬೇಕೆಂದು ಅವರು ತಿಳಿದಿರುವರೋ? ಅವರು ಯಾವುದೇ ಕಠಿಣ ಪರಿಸ್ಥಿತಿಯನ್ನು ಎದುರಿಸು ವಾಗ, ಅವುಗಳಿಂದ ಅವರನ್ನು ದಾಟಿಸುವಂಥ ಯೇಸುವಿನಲ್ಲಿಯ ನಂಬಿಕೆಯಲ್ಲಿ ಸ್ಥಿರತೆಯಿರುವುದೋ? ಅವರಿಗೆ ಯಾವ ಭವಿಷ್ಯವು ಕಾದಿರುವುದೋ ಎಂಬುದನ್ನು ನಾವು ತಿಳಿದಿರುವದಿಲ್ಲ. ಮತ್ತು ತಂದೆಯಂತೆ, ಅವರು ಎದುರಿಸಬೇಕಾದದ್ದನ್ನು ಎದುರಿಸುವದಕ್ಕಾಗಿ ನಾನು ಅವರನ್ನು ಸಿದ್ಧಪಡಿಸಿದ್ದೇನೋ ಎಂದು ಆಶ್ಚರ್ಯಪಡುತ್ತೇನೆ.

ಯೇಸುವು, ನಮ್ಮ ಪಾಠದ ಪಠ್ಯದಲ್ಲಿ, ತಂದೆಯು ತನ್ನ ಮಕ್ಕಳನ್ನು ಲೋಕದೊಳಗೆ ಕಳುಹಿಸುವದರ ಬಗ್ಗೆ ಚಿಂತಿತನಾಗಿರುವಂತೆ ಕಾಣಿಸಿಕೊಳ್ಳುತ್ತಾನೆ. ತನ್ನ ಅನುಯಾಯಿಗ ಳೊಂದಿಗಿರಲು ಸಹಾಯಕರನ್ನು ಕಳುಹಿಸುತ್ತೇನೆ ಎಂದು ಆತನು ಹೇಳಿದ್ದಾನೆ. ನಮ್ಮ ಜೀವಿತಗಳಿಗೆ ಒಂದು ಲಂಗರಿನಂತೆ ಸತ್ಯವು ನಮಗೆ ಕೊಡಲ್ಪಟ್ಟಿದೆ, ರಾತ್ರಿಯನ್ನು ದಿನವು ಹಿಂಬಾಲಿಸುವಂತೆ, ನಮ್ಮ ದುಃಖವನ್ನು ಹಿಂಬಾಲಿಸಿ ಆನಂದವು ಬರುತ್ತದೆ, ನಮಗಾಗಿ ಅತ್ಯುತ್ತಮ ವಾದದ್ದನ್ನು ಬಯಸುವ ಪ್ರೀತಿಯ ತಂದೆಯಿಂದ ನಮ್ಮ ಪ್ರಾರ್ಥನೆಗಳು ಕೇಳಲ್ಪಡುವವು. ಮತ್ತು ಯೇಸುವು ಆಗಲೇ ಲೋಕವನ್ನು ಜಯಿಸಿದ್ದಾನೆ. ಇನ್ನೂ ಹೆಚ್ಚು ಯಾವುದನ್ನು ನಾವು ಕೇಳುವ ಸಾಧ್ಯತೆಯಿದೆ? ನಮ್ಮ ಜೀವಿತಗಳಲ್ಲಿ ನಾಳಿನ ದಿನವು ಏನನ್ನೇ ತರಲಿ, ಅದು ತೊಂದರೆ ಇಲ್ಲವೇ ಶಾಂತ ಪರಿಸ್ಥಿತಿಯಾಗಿರಲಿ, ನಮಗೆ ಸಮಾಧಾನವಿರುವುದು ಯೇಸುವು ನಮಗಾಗಿ ನಮ್ಮ ಭವಿಷ್ಯವನ್ನು ಸಿದ್ಧಪಡಿಸಿರುವನು!

ಈ ಅಧ್ಯಾಯದ ಮನೋಭಾವನೆಯು ಬರೆಯಲ್ಪಟ್ಟ ಅತೀ ಸುಂದರವಾದ ಕ್ರೈಸ್ತ ಸಂಗೀ ತಗಳಲ್ಲಿ ಒಂದರಲ್ಲಿ ಪ್ರತಿಬಿಂಬಿಸಲ್ಪಟ್ಟಿದೆ:

ಸಮಾಧಾನ, ಪರಿಪೂರ್ಣ ಸಮಾಧಾನ, ಪಾಪದ ಈ ಅಂಧಕಾರ ಜಗತ್ತಿನಲ್ಲಿ:
ಯೇಸುವಿನ ರಕ್ತವು ಒಳಗೆ ಉಸುರುವುದು ಸಮಾಧಾನ.
ಸಮಾಧಾನ, ಪರಿಪೂರ್ಣ ಸಮಾಧಾನ, ಗುಂಪು ಕೂಡುವ ಕೆಲಸಗಳ ಒತ್ತಡದಿಂದ:
ಯೇಸುವಿನ ಚಿತ್ತವನ್ನು ಮಾಡಲು - ಇದು ವಿಶ್ರಾಂತಿಯಾಗಿರುವುದು.
ಸಮಾಧಾನ, ಪರಿಪೂರ್ಣ ಸಮಾಧಾನ, ದುಃಖಗಳು ಸುತ್ತುವರಿಯುವದರಿಂದ:
ಯೇಸುವಿನ ಎದೆಯ ಮೇಲೆ ಶಾಂತಿಯು ಕಂಡು ಬರುವುದು.
ಸಮಾಧಾನ, ಪರಿಪೂರ್ಣ ಸಮಾಧಾನ, ದೂರದಲ್ಲಿರುವ ಪ್ರೀಯರೊಂದಿಗೆ:
ಯೇಸುವಿನ ಕಾಪಾಡುವಿಕೆಯಲ್ಲಿ ನಾವು ಮತ್ತು ಅವರು ಸುರಕ್ಷಿತವಾಗಿರುವೆವು.
ಸಮಾಧಾನ, ಪರಿಪೂರ್ಣ ಸಮಾಧಾನ, ನಮ್ಮ ಭವಿಷ್ಯವೆಲ್ಲವೂ ಅಪರಿಚಿತವಾಗಿರುವುದು:
ಯೇಸುವನ್ನು ನಾವು ಬಲ್ಲೆವು, ಮತ್ತು ಆತನು ಸಿಂಹಾಸನದ ಮೇಲೆ ಇರುವನು.

ಅಷ್ಟು ಸಾಕು; ಲೋಕದ ಹೋರಾಟ, ಬೇಗನೇ ತಿರುವುದು:
ಮತ್ತು ಯೇಸು ಕರೆಯುತ್ತಿರುವನು ಪರಲೋಕದ ಪರಿಪೂರ್ಣ ಸಮಾಧಾನಕ್ಕೆ.
Edward H. Bickersteth

---

ಟಿಪ್ಪಣಿಗಳು

[1]ಈ ಕಥೆಯು ಆದಿಕಾಂಡ 32:22-32ರಲ್ಲಿ ಕಂಡು ಬರುತ್ತದೆ. [2]ಗ್ರೀಕ್ ಪದವು ಎಂದಿರುತ್ತದೆ. ಅದರ ಅರ್ಥ "ಸಹಾಯಕ," ಸಮಾಲೋಚಕ," "ಆದರಿಕ," "ನ್ಯಾಯವಾದಿ" ಇಲ್ಲವೇ "ಸಹಾಯ ಮಾಡಲಿಕ್ಕೆ ಜೊತೆಯಾಗಿ ಬರುವನು" ಎಂದಾಗಿರುತ್ತದೆ. ಇಲ್ಲಿ ಅದು ಯೇಸುವಿನ ಪುನರುತ್ಥಾನ ಮತ್ತು ದಿವಾರೋಹಣದ ನಂತರ ಪಂಚಾಶತ್ತಮದ ದಿನದಂದು ಅಪೊಸ್ತಲರ ಮೇಲೆ ಸುರಿಸಲ್ಪಟ್ಟ ಪರಿಶುದ್ಧಾತ್ಮನಿಗೆ ಸಂಬಂಧಿಸುತ್ತದೆ.